ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

**Wednesday, October 5th, 2010**

# ಜೈನ್ ಅಂತಾರಾಷ್ಟ್ರೀಯ ಶಾಲೆಗೆ ಮಾನ್ಯತಾ ಪತ್ರ



**ಬೆಂಗಳೂರು, ಅ.5-** ಜೈನ್ ಇಂಟರ್ ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್‌ಗೆ ಶಿಕ್ಷಣ ಮತ್ತು ತರಬೇತಿಗಾಗಿ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಎಬಿಇಟಿ)ಯಿಂದ ಗುಣಮಟ್ಟದ ಶಾಲಾ ಆಡಳಿತ ಮಾನ್ಯತಾ ಪತ್ರ ಲಭಿಸಿದೆ.

ಈ ಗೌರವ ಪಡೆಯುತ್ತಿರುವ ಕರ್ನಾಟಕ ಪ್ರಪ್ರಥಮ ಶಾಲೆ ಇದಾಗಿದೆ.

ಜೈನ್ ಹೆರಿಟೇಜ್ ಶಾಲೆ ಆವರಣದಲ್ಲಿ ಭಾರತೀಯ ಗುಣಮಟ್ಟ ಮಂಡಳಿಯ ಪ್ರಧಾನ ಕಾರ್ಯದರ್ಶಿ ಡಾ.ಗಿರಿಧರ್ ಜೆ.ಜ್ಞಾನಿ ಅವರು, ಜೆಜಿಐ ಸಮೂಹದ ಅಧ್ಯಕ್ಷ ಡಾ.ಆರ್.ಚೆನ್ ರಾಜ್ ಜೈನ್ ಅವರಿಗೆ ಮಾನ್ಯತಾ ಪ್ರಮಾಣ ಪತ್ರವನ್ನು ಪ್ರದಾನ ಮಾಡಿದರು.

ಜೈನ್ ಇಂಟರ್ ನ್ಯಾಷನಲ್ ರೆಸಿಡೆನ್ಸಿಯಲ್ ಶಾಲೆಯ ಸಿಇಓ ವಿಂಗ್ ಕಮಾಂಡರ್ (ನಿವೃತ್ತ) ಕೆ.ಎಲ್.ಗಣೇಶ ಶರ್ಮಾ,ಜೈನ್ ವಿಶ್ವವಿದ್ಯಾಲಯದ ಕುಲಪತಿ ಡಾ.ಎನ್. ಸುಂದರರಾಜನ್ ಮತ್ತು ಜೈನ್ ಹೆರಿಟೇಜ್ ಸ್ಕೂಲ್‌ನ ಪ್ರಾಂಶುಪಾಲರಾದ ಅರ್ಚನಾ ವಿಶ್ವನಾಥ್ ಅವರು ಉಪಸ್ಥಿತರಿದ್ದರು. ಭಾರತೀಯ ಗುಣಮಟ್ಟ ಮಂಡಳಿ (ಕ್ಯೂಸಿಐ) ನಿಗದಿ ಪಡಿಸಿದ ಮಾನದಂಡಗಳನ್ನು ಪೂರೈಸುವ ಶಾಲೆಗಳಿಗೆ 4 ವರ್ಷಗಳ ಅವಧಿಯ ಮಾನ್ಯತಾ ಪ್ರಮಾಣಪತ್ರ ನೀಡಲಾಗುತ್ತದೆ.